# ಸಾರ್ವಜನಿಕ ಗ್ರಂಥಾಲಯ ಪುಸ್ತಕ ಆಯ್ಕೆಯಲ್ಲಿ ಓದುಗರಿಗಿಲ್ಲ ಪ್ರಾತಿನಿಧ್ಯ *

**ಎಂ. ಎಸ್. ಶ್ರೀಧರ್**

**ಸಾರಾಂಶ:** ಯಾವುದೇ ಗ್ರಂಥಾಲಯದ ಯಶಸ್ಸನ್ನು ನಿರ್ಧರಿಸುವವನು ಓದುಗ. ಗ್ರಂಥಾಲಯಗಳಿರುವುದು ಓದುಗರಿಗಾಗಿ. ಇಂತಹ ಓದುಗನನ್ನು ಪುಸ್ತಕ ಆಯ್ಕೆಯ ಪ್ರತಿನಿಧಿಯನ್ನಾಗಿಸಬೇಕೆಂಬುದು ಲೇಖನದ ಆಶಯ. ಈ ಹಿನ್ನೆಲೆಯಲ್ಲಿ ಗ್ರಂಥಾಲಯಗಳಿಗೆ ಪುಸ್ತಕ ಆಯ್ಕೆಯ ವೇಳೆ ನಡೆಯುವ ಪ್ರಹಸನಗಳನ್ನು, ಲಾಭಕೋರ ಉದ್ದೇಶಗಳಿಗಾಗಿ ಪುಸ್ತಕ ಸಂಗ್ರಹದ ಗುಣಮಟ್ಟವನ್ನು ತೂರಿಬಿಡುವ ಪ್ರಸಕ್ತ ನಿಯಮಾವಳಿ ಹಾಗೂ ಕಾಯ್ದೆಗಳ ಮಿತಿಯನ್ನು ಪಟ್ಟಿ ಮಾಡುವುದರ ಜೊತೆಗೆ ಸಂಬಂಧಪಟ್ಟವರ ನಿರಾಸಕ್ತಿಯನ್ನು ತೆರೆದಿಡುತ್ತದೆ. ಗ್ರಂಥಾಲಯಗಳನ್ನು ಓದುಗರಿಗೆಂದಲ್ಲದೆ ತಮ್ಮ ವೈಯಕ್ತಿಕ ಲಾಭಕ್ಕೆ ಬಳಸಿಕೊಳ್ಳುವ ಪ್ರಕಾಶಕರ ಏಜೆಂಟರಂತೆ ವರ್ತಿಸುವ ಸಗಟು ಖರೀದಿ ಸಮಿತಿಯನ್ನು ಖಂಡಿಸುತ್ತಾ ಸಮಾಜದ ಎಲ್ಲ ವರ್ಗಗಳ ಓದುಗರ ಪ್ರಾತಿನಿಧ್ಯ ಇರುವ ಸಮಿತಿಯಿಂದ ದಕ್ಷ ನಿರ್ಣಯ ಸಾಧ್ಯವೆಂದು ಹೇಳುತ್ತಾ ಪುಸ್ತಕ ಖರೀದಿ ಪ್ರಕ್ರಿಯೆಯಲ್ಲೂ ಮಾರ್ಪಾಡು ಸೂಚಿಸುವ ಲೇಖನ ಗ್ರಂಥಾಲಯ ಕಾಯ್ದೆಯ ತಿದ್ದುಪಡಿಯ ಅವಶ್ಯಕತೆಯನ್ನು ತಿಳಿಸುತ್ತದೆ.

**ಸೂಚಿಪದಗಳು:** ಸಾರ್ವಜನಿಕ ಗ್ರಂಥಾಲಯಗಳು; ಓದುಗರು; ಪುಸ್ತಕ ಆಯ್ಕೆ; ಪ್ರಕಾಶಕರು; ಸಗಟು ಖರೀದಿ

ಸಾರ್ವಜನಿಕ ಗ್ರಂಥಾಲಯ ಇಲಾಖೆ ಗ್ರಂಥಾಲಯ ಕಾಯಿದೆ (೧೯೬೫) ಅನುಷ್ಠಾನಕ್ಕೆ ಬಂದ ೪೦ ವರ್ಷಗಳಲ್ಲಿ ರಾಜ್ಯದ ೫೬೭೮ ಗ್ರಾಮಪಂಚಾಯಿತಿಗಳ ಪೈಕಿ ೩೨೫೧ ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯಗಳನ್ನು ತೆರೆದಿರುವುದಾಗಿ ಘೋಷಿಸಿದೆ. ಇದೇ ವೇಗದಲ್ಲಿ ರಾಜ್ಯದ ಎಲ್ಲ ೨೭೦೦೦ ಗ್ರಾಮಗಳೂ ಗ್ರಂಥಾಲಯ ಹೊಂದಲು ೩೬೦ ವರ್ಷಗಳೇ ಬೇಕು. ಆದರೆ ವಿಶ್ವ ಪುಸ್ತಕದಿನದಂದು ಎಲ್ಲವನ್ನೂ ಒಂದೇ ವರ್ಷದಲ್ಲಿ ಸಾಧಿಸುವ ಭರವಸೆ ವ್ಯಕ್ತವಾಗಿದೆ. ಎರಡು ವರ್ಷಗಳ ಹಿಂದೆ ಇದನ್ನೆ ೫ ವರ್ಷಗಳಲ್ಲಿ ಸಾಧಿಸುವ ಆಶಯವಿತ್ತು. ಸುಮಾರು ಎರಡು ವರ್ಷಗಳು ಸ್ಥಗಿತಗೊಂಡು ನೆನೆಗುದಿಗೆ ಬಿದ್ದಿದ್ದ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಪುಸ್ತಕಗಳ ಆಯ್ಕೆ ಪ್ರಕ್ರಿಯೆ ಹೊಸ ಸಮಿತಿಯ ರಚನೆಯೊಂದಿಗೆ ಆರಂಭಗೊಂಡು ಮೊದಲ ಪ್ರಹಸನವಾಗಿ ಸಮಿತಿ ಸದಸ್ಯರ ನೇಮಕಾತಿಯನ್ನೇ ಅಕ್ರಮವಾಗಿ ತಿದ್ದಿರುವುದಾಗಿ ಸುದ್ದಿಯಾಯಿತು. ಈ ಹಿಂದೆ ಆಯ್ಕೆಯಾದ ಪುಸ್ತಕಗಳ ಪಟ್ಟಿ ತಿದ್ದಿದ ಆರೋಪಗಳಿದ್ದುವು. ಜೊತೆಗೆ ಇಲಾಖೆ ಆಯ್ಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ಭರವಸೆ, ಬೆಂಗಳೂರು ಮಹಾನಗರ ಪಾಲಿಕೆ ಸಂಗ್ರಹಿಸಿದ ಶೇ. ೬ ಗ್ರಂಥಾಲಯ ಕರದ ಬಾಕಿ ೨೪ ಕೋಟಿ ರೂಪಾಯಿಗಳನ್ನು ಇಲಾಖೆಗೆ ವರ್ಗಾಯಿಸಲು ಹಿಂದೇಟು ಹಾಕಿರುವ (ಈ ವಿಷಯದಲ್ಲಿ ಇತರ ಪಾಲಿಕೆ ಮತ್ತು ಪುರಸಭೆಗಳೇನು ಹಿಂದೆ ಬಿದ್ದಿಲ್ಲ!), ಹಿಂದಿನ ವರ್ಷಗಳಲ್ಲಿ ಪ್ರಕಟವಾದ ಪುಸ್ತಕಗಳನ್ನು ಕೊಳ್ಳಲು ನಿರ್ಬಂಧವಿರುವುದರಿಂದ ಪ್ರಕಟಣಾ ವರ್ಷ ಮತ್ತು ಗ್ರಂಥಾಲಯ ಆವೃತ್ತಿಯ ಬೆಲೆ ಬದಲಿಸುವ, ಪುಟಗಳನ್ನಾದರಿಸಿ ಪುಸ್ತಕ ಬೆಲೆ ನಿರ್ಧರಿಸುವ ಸುದ್ದಿಗಳಿವೆ. ಹಲವಾರು ವರ್ಷಗಳಿಂದ ಸಾರ್ವಜನಿಕ ಗ್ರಂಥಾಲಯ ಇಲಾಖೆ ಅನುಸರಿಸುವ ಪುಸ್ತಕಗಳ ಆಯ್ಕೆ ಮತ್ತು ಸಗಟು ಖರೀದಿ ನೀತಿಯ ಬಗ್ಗೆ ಸಾಹಿತಿಗಳ ಮತ್ತು ಪುಸ್ತಕೋದ್ಯಮದ ಗಂಭೀರ ಆರೋಪಗಳಿವೆ. ವಿಚಿತ್ರವೆಂದರೆ ಸಾರ್ವಜನಿಕ ಗ್ರಂಥಾಲಯಗಳ ಇತರ ಕಾರ್ಯ, ಕರ್ತವ್ಯ ಮತ್ತು ಸೇವೆಗಳ ಬಗ್ಗೆಯಾಗಲಿ, ಖರೀದಿಸಿದ ಪುಸ್ತಕಗಳ ಉಪಯೋಗದ ಬಗ್ಗೆಯಾಗಲಿ ಅಷ್ಟು ಗಮನ ಹರಿಸಿಯೇ ಇಲ್ಲ.

**ಸಮಿತಿ:** ಇತರ ಕ್ಷೇತ್ರಗಳ (ವೈದ್ಯ, ಕೃಷಿ, ವಿಜ್ಞಾನ, ತಂತ್ರಜ್ಞಾನ, ಸಮಾಜ ವಿಜ್ಞಾನ) ತಜ್ಞರನ್ನು ಕಡೆಗಣಿಸಿ ಸಮಿತಿಯ ಅಧ್ಯಕ್ಷಗಿರಿಯನ್ನು ಕನ್ನಡ ಪ್ರಾಧ್ಯಾಪಕರು/ ಸಾಹಿತಿಗಳಿಗೆ ಮೀಸಲಿರಿಸುವುದು ಒಂದು ಪರಂಪರೆಯಾದರೆ, ೨೦ ಸದಸ್ಯರ ಸಮಿತಿಯಲ್ಲಿ ಕನ್ನಡ ಸಾಹಿತಿಗಳು, ಗ್ರಂಥಪಾಲಕರು ಮತ್ತು ಪುಸ್ತಕೋದ್ಯಮಿಗಳೇ ತುಂಬಿದ್ದಾರೆ. ಸಮಿತಿಯ ಸದಸ್ಯತ್ವಕ್ಕಾಗಿ ಪ್ರಕಾಶಕ ಮತ್ತು ಪುಸ್ತಕ ಮಾರಾಟಗಾರರ ವಿವಿಧ ಸಂಘಗಳ ಪ್ರತಿನಿಧಿಗಳ ಮಧ್ಯೆಯೂ ಪೈಪೋಟಿ ಮತ್ತು ಜಟಾಪಟಿ ನಡೆದಿದೆ. ಈ ಮಧ್ಯೆ ರಾಜ್ಯ ವಿಜ್ಞಾನ ಪರಿಷತ್ತಿನ ಪದಾಧಿಕಾರಿಯೊಬ್ಬರು ಈ ಸಮಿತಿಯನ್ನು ಪ್ರತಿನಿಧಿಸಿಯೂ ಕನ್ನಡದಲ್ಲಿ ಪ್ರಕಟವಾಗಿರುವ ೩೦೦೦ಕ್ಕೂ ಹೆಚ್ಚು ಜನಪ್ರಿಯ ವಿಜ್ಞಾನ ಪುಸ್ತಕಗಳ ಪಟ್ಟಿಗೆ ಮುಕ್ತಿಯಿಲ್ಲ ಮತ್ತು ಸಾರ್ವಜನಿಕ ಗ್ರಂಥಾಲಯಗಳಲ್ಲಿ ಅವುಗಳ ಸುಳಿವಿಲ್ಲ. ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದ ಪದಾಧಿಕಾರಿ ಹುದ್ದೆಯಿಂದಾಗಿ ದೊರೆಯುವ ಸಾರ್ವಜನಿಕ ಗ್ರಂಥಾಲಯ ಆಯ್ಕೆ ಸಮಿತಿಯ ಸದಸ್ಯತ್ವ ದಶಕಗಳಿಂದ ಒಂದು ಕೇಂದ್ರ ಆಕರ್ಷಣೆಯಾಗಿ (ಆಮಿಷ!) ಅದಕ್ಕಾಗಿ ಪೈಪೋಟಿಯೂ ಇದೆ. ನಿಷ್ಕ್ರಿಯ ಗ್ರಂಥಾಲಯ ಸಂಘ ಹೇಗೋ ಬದುಕುಳಿಯಲು ರಾಜ್ಯ ಗ್ರಂಥಾಲಯ ಕಾಯ್ದೆ ದೊರಕಿಸಿರುವ ಈ ಸದಸ್ಯತ್ವ ನೆರವಾಗಿರುವುದು ಒಂದು ವಿಪರ್ಯಾಸ. ಇಂತಹ ಸಾಹಿತಿ, ಗ್ರಂಥಪಾಲಕ ಮತ್ತು ಪುಸ್ತಕೋದ್ಯಮಿಗಳ ಕೃಪಾಪೋಷಿತ ಮಂಡಳಿ ಬೆಳೆಸಿದ ಪುಸ್ತಕ ಸಂಗ್ರಹ ದುರ್ಬಲ, ಹಳತು, ಅಪ್ರಯೋಜಕ, ಅಪ್ರಸ್ತುತ ಮತ್ತು ಕಳಪೆ ಎಂದು ಈ ಹಿಂದೆ ನಡೆಸಿದ ಮೂರು ಸರ್ವೇಕ್ಷಣೆಗಳು ತೋರಿವೆ. ಹೆಚ್. ಎ. ಖಾನ್ ಅವರು ಪುಸ್ತಕ ಸಂಗ್ರಹಣೆಯ ಗುಣಮಟ್ಟ ಮತ್ತು ಪ್ರಸ್ತುತೆಯನ್ನು ಪ್ರಶ್ನಿಸಿದರೆ, ರಾಮಕೃಷ್ಣಗೌಡ ಅವರು ಕೇವಲ ಶೇ. ೨ ಕ್ಕೂ ಕಡಿಮೆ ಗ್ರಂಥಗಳು ತುಂಬ ಚೆನ್ನಾಗಿವೆ ಅಥವ ತುಂಬ ಉಪಯುಕ್ತವಾಗಿವೆ ಎಂದೂ, ಶೇ. ೫೫ ಕೆಟ್ಟದ್ದಾಗಿವೆ ಎಂದೂ ಮತ್ತು ಶೇ. ೪೦ ಅಪ್ರಯೋಜಕ ಎಂದೂ ನಿರ್ಧರಿಸಿದ್ದಾರೆ. ಎ. ವೈ. ಆಸುಂದಿ ಮತ್ತು ಜೇಮ್ಸ್ ಪಿಟ್ಟಮನ್ ಅವರು ಶೇ. ೪೮ ಓದುಗರು ಪುಸ್ತಕಗಳು ಅಲಭ್ಯ ಎಂದೂ, ಶೇ. ೬೪ ಮಂದಿ ಪುಸ್ತಕಗಳು ಹಳತು ಮತ್ತು ಅಪ್ರಯೋಜಕ ಎಂದೂ ಮತ್ತು ಅತೀ ಹೆಚ್ಚು ಮಂದಿ ಓದುಗರು ಪುಸ್ತಕ ಸಂಗ್ರಹಣೆಯನ್ನು ಬಲಪಡಿಸಬೇಕೆಂದು ಸೂಚಿಸಿರುವುದಾಗಿ ವರದಿ ಮಾಡಿದ್ದಾರೆ.

**ಓದುಗರು:** ಓದುಗರಿಗಾಗಿ ಸಾರ್ವಜನಿಕ ಗ್ರಂಥಾಲಯಗಳು. ಓದುಗರ ಅವಶ್ಯಕತೆಗಳಿಗನುಗುಣವಾಗಿ ಅವರ ಅಭಿರುಚಿ, ಆಶೋತ್ತರಗಳಿಗೆ ಸ್ಪಂದಿಸಿ ಪುಸ್ತಕ ಸಂಗ್ರಹ ಬೆಳೆಸಿ ಸೇವೆಗಳನ್ನು ರೂಪಿಸಬೇಕೆ ಹೊರತು ಪುಸ್ತಕೋದ್ಯಮಕ್ಕಾಗಿ ಗ್ರಂಥಾಲಯಗಳು ಒಂದು ಸಬ್ಸಿಡಿ ವ್ಯವಸ್ಥೆಯಾಗಬಾರದು. ಓದುಗರಿಗೆ ಪ್ರಕಟಿತ/ ಹೊಸ ಪುಸ್ತಕಗಳ ಪಟ್ಟಿ (catalogue), ಸಮೀಕ್ಷೆಗಳು (reviews), ಗ್ರಂಥಪ್ರಶಂಸೆಗಳು (blurbs), ಪತ್ರಿಕೆಗಳಲ್ಲಿ ಪ್ರಕಟಗೊಳ್ಳುವ ಪುಸ್ತಕ

ವಿಮರ್ಶೆಗಳನ್ನು ಸಂಗ್ರಹಿಸಿ ಪುಸ್ತಕಗಳ ಬಗ್ಗೆ ಮಾಹಿತಿ ನೀಡಿ, ಪುಸ್ತಕಗಳ ಪರಿಶೀಲನೆಗೆ ಮುಕ್ತ ಅವಕಾಶ ಕಲ್ಪಿಸಿ, ಆಹ್ವಾನಿಸಿದ ಸಲಹೆ ಮತ್ತು ಬೇಡಿಕೆಗಳಿಗೆ ಆದ್ಯತೆ ನೀಡಬೇಕು. ಇಲಾಖೆ ತನ್ನ ವೆಬ್ ಸೈಟ್‌ನಲ್ಲಿಯೂ ಇಂತಹದೇ ಮಾಹಿತಿಗಳನ್ನು ಒದಗಿಸಿ ಆನ್‌ಲೈನ್ ಸಲಹೆ ಪಡೆಯುವಂತಿರಬೇಕು. ವಾಸ್ತವದಲ್ಲಿ ಓದುಗರ ಸಲಹೆಗಳು ವಿರಳ, ಅವರು ತಮ್ಮ ಹಕ್ಕನ್ನು ಚಲಾಯಿಸುವುದಿಲ್ಲ, ಹೆಚ್ಚಿನ ಓದುಗರು ಪುಸ್ತಕ ಆಯ್ಕೆ ತಮ್ಮ ಜವಾಬ್ದಾರಿಯಲ್ಲವೆಂದು ಭಾವಿಸಿ ಅನಾಸಕ್ತರಾಗಿರುತ್ತಾರೆಂಬ ಕಾರಣಗಳಿಂದ ಗ್ರಂಥ ಸಂಗ್ರಹಣೆ ಕಾರ್ಯದಲ್ಲಿ ಅತೀ ಮುಖ್ಯವಾದ ಈ ಆಯ್ಕೆಯ ಮಾರ್ಗವನ್ನು ಕಡೆಗಣಿಸದೆ ಗ್ರಂಥಾಲಯಗಳು ಪ್ರಾಮಾಣಿಕವಾಗಿ ಮತ್ತು ಪ್ರಯತ್ನಪೂರ್ವಕವಾಗಿ ಓದುಗರನ್ನು ಆಯ್ಕೆಯ ಪ್ರಕ್ರಿಯೆಯಲ್ಲಿ ಸೇರಿಸಿಕೊಳ್ಳಬೇಕು. ಇರುವ ಅತ್ಯಲ್ಪ ಸಂಖ್ಯೆಯ ಓದುಗರ ಸಲಹೆ, ಬೇಡಿಕೆ ಮತ್ತು ಅನಿಸಿಕೆಗಳಿಗೆ ಆದರದ ಪ್ರೋತ್ಸಾಹವಿಲ್ಲವಾಗಿದೆ. ಸದಭಿರುಚಿಯ ಓದುಗರನೇಕರು ಇತರ ಗ್ರಂಥಾಲಯಗಳನ್ನು ಬಳಸುತ್ತಿದ್ದಾರೆ. ಅವರ ಅನುಭವ ಮತ್ತು ಅನಿಸಿಕೆಗಳು ಗ್ರಂಥಾಲಯದ ಪುಸ್ತಕ ಸಂಗ್ರಹ ಅಬಿವೃದ್ಧಿಗೆ ಅತ್ಯಮೂಲ್ಯ. ಮೇಲಾಗಿ, ಖ್ಯಾತ ಲೇಖಕರಾರೂ ಅವರ ಪುಸ್ತಕಗಳನ್ನು ಈ ಆಯ್ಕೆ ಸಮಿತಿಯ ಮುಂದೆ ಸಗಟು ಖರೀದಿಸುವಂತೆ ಕೋರುವುದಿಲ್ಲವಾಗಿ, ಸಮಿತಿಯ ಅನುಮತಿಯನ್ನು ನಿರೀಕ್ಷಿಸದೆಯೂ ಅಂಥಹವರ ಮತ್ತು ಪಶಸ್ತಿ ವಿಜೇತ ಕೃತಿಗಳನ್ನು ತತ್‌ಕ್ಷಣ ಖರೀದಿಸಿ ಓದುಗರಿಗೆ ದೊರಕಿಸಿಕೊಡಬೇಕು. ಇದಲ್ಲದೆ ಪ್ರಕಟಿತ ಪುಸ್ತಕ ವಿಮರ್ಶೆಗಳು ಆಯ್ಕೆಗೆ ಒಂದು ಮುಖ್ಯ ಆಧಾರವಾಗಬೇಕು.

***ಗ್ರಂಥಾಧಿಕಾರಿಗಳು:*** ಗ್ರಂಥಾಧಿಕಾರಿಗಳ ಆಯ್ಕೆಯಲ್ಲಿ ನಂಬಿಕೆ ಮತ್ತು ವಿಶ್ವಾಸವಿಲ್ಲದಿರುವುದರಿಂದ ಆಯ್ಕೆಗೆ ಬೇಕಾಗುವ ಮಾಹಿತಿ ಮತ್ತು ಆಧಾರಗಳನ್ನು ಒದಗಿಸುವುದು ಮತ್ತು ಪುಸ್ತಕಗಳ ಆಯ್ಕೆಯನ್ನು ಸುಗಮಗೊಳಿಸಲು ಬೇಕಾದ ಪೂರ್ವ ಸಿದ್ದತೆಗಳಲ್ಲಿ ತೊಡಗಿಸಿಕೊಂಡು ಹಿನ್ನೆಲೆಯಲ್ಲಿರುವುದು ಸೂಕ್ತ. ಗ್ರಂಥಾಲಯಗಳಲ್ಲಿ ಈಗಾಗಲೆ ಇರುವ ಪುಸ್ತಕ ಸಂಗ್ರಹಣೆಯ ರೂಪುರೇಷೆ, ಭಾಷೆ ಮತ್ತು ವಿಷಯಗಳ ಪ್ರಾತಿನಿಧ್ಯತೆ, ಬೆಲೆಗಳ ಪರಿಶೀಲನೆ, ಬೇಕಾಗಬಹುದಾದ ಪ್ರತಿಗಳ ನಿರ್ಧಾರ, ಪುಸ್ತಕ ಪರಿಶೀಲನೆಗೆ ವ್ಯಾಪಕ ವ್ಯವಸ್ಥೆ, ಕಾಲಕಾಲಕ್ಕೆ ಸರ್ವೇಕ್ಷಣೆಗಳನ್ನು ನಡೆಸಿ ಓದುಗರ ಅವಶ್ಯಕತೆ–ಅಭಿರುಚಿಗಳನ್ನು ಗುರುತಿಸುವುದು, ಓದುಗರ ಸಲಹೆಗಳನ್ನು ಆಹ್ವಾನಿಸಿ ಸಂಗ್ರಹಿಸುವುದು, ಎರವಲು ಸೇವೆಯಲ್ಲಿ ಈಗಾಗಲೆ ಉಪಯೋಗಿಸಿದ ಪುಸ್ತಕಗಳ ಅಂಕಿ ಅಂಶಗಳನ್ನು ಸಂಗ್ರಹಿಸಿ ಪರಿಷ್ಕರಿಸುವುದು, ಪ್ರಶಸ್ತಿ–ಪುರಸ್ಕಾರ ಪಡೆದ ಮತ್ತು ದಾಖಲೆ ಸೃಷ್ಟಿಸಿದ ಕೃತಿಗಳನ್ನು ಪಟ್ಟಿ ಮಾಡುವುದು, ಪರಾಮರ್ಶನ ಸೇವೆಯ ಬೇಡಿಕೆ ವಿಶ್ಲೇಷಿಸಿ ಬೇಕಾಗುವ ಸಂದರ್ಭ ಗ್ರಂಥಗಳನ್ನು ಗುರುತಿಸುವುದು, ಇತ್ಯಾದಿ ತುರ್ತಾಗಿ ಆಗಬೇಕಿದೆ.

***ಸಗಟು ಖರೀದಿ ಮತ್ತು ಪುಸ್ತಕೋದ್ಯಮ:*** ಏಕಗವಾಕ್ಷಿ ಕೇಂದ್ರೀಕೃತ ಸಗಟು ಖರೀದಿ ಪದ್ಧತಿಯಲ್ಲಿ ಸ್ಥಳೀಯ ಅವಶ್ಯಕತೆಗಳಿಗನುಗುಣವಾಗಿ ಓದುಗರಿಗೆ ಬೇಕಾದ ಪುಸ್ತಕಗಳನ್ನು ಬೇಕಾದ ಗ್ರಂಥಾಲಯಗಳಿಗೆ ಬೇಕೆನಿಸಿದಾಗ ಕೊಳ್ಳುವುದಕ್ಕೆ ಅವಕಾಶವಿಲ್ಲ. ಬದಲಾಗಿ ಇದು ಪ್ರಕಟಿತ ಕನ್ನಡ ಪುಸ್ತಕಗಳ ಸಬ್ಸಿಡಿಗಾಗಿ ಪುಸ್ತಕೋದ್ಯಮ ಚಟುವಟಿಕೆಯಿರುವ ನಗರಗಳಲ್ಲಿ ಅಧಿಕಾರ ಕೇಂದ್ರೀಕೃತಗೊಂಡು ಪಟ್ಟಭದ್ರಹಿತಾಸಕ್ತಿಗಳಿಗೆ ಉತ್ತೇಜನ ಕೊಟ್ಟಿದೆ. ಇದನ್ನು ಕನಿಷ್ಠ ಜಿಲ್ಲಾ ಮಟ್ಟಕ್ಕಾದರೂ ವಿಕೇಂದ್ರೀಕರಣಗೊಳಿಸಬೇಕು. ಜಿಲ್ಲಾ ಸಮಿತಿಗಳು ಸಭೆ ಸೇರದೆಯೂ ಆಯ್ಕೆ ನಡೆಸಬಹುದು. ಈ ಹಿಂದೆ ಹಿರಿಯ ಸಾಹಿತಿಗಳ ಪುಸ್ತಕಗಳನ್ನು ಇಂಥಹ ಸಮಿತಿಯಲ್ಲಿನ ಸಾಹಿತ್ಯೇತರರು ಆಯ್ಕೆ ಮಾಡುವುದು ಸಾಹಿತಿಗಳಿಗೆ ಎಸಗಿದ ಅವಮಾನ, ಸಾಹಿತ್ಯ ಕ್ಷೇತ್ರದಲ್ಲಿ ಗ್ರಂಥಾಲಯದ ಹಸ್ತಕ್ಷೇಪ ಎಂದು ಆರೋಪಿಸಲಾಯಿತು. ಈ ಭಾವನೆಗಳು ಸಾಧುವಲ್ಲ. ಇಂಥಹದೇ ಆರೋಪವನ್ನ ಇತರ ಕ್ಷೇತ್ರದ ಲೇಖಕರೂ ಮಾಡಬಹುದಲ್ಲವೆ? ವಿವಿದ ಭಾಷೆ ಮತ್ತು ವಿಷಯಗಳ ಹಾಲಿ ಇರುವ ಮತ್ತು ಹಿಂದಿನ ಕೃತಿಗಳನ್ನು ಒಂದು ಸ್ಥಳೀಯ ಸಾಧಾರಣ ಗ್ರಂಥಾಲಯ ಆಯ್ಕೆ ಸಮಿತಿ ಪರಿಶೀಲಿಸಿ, ಓದುಗರ ಅಭಿರುಚಿಗೆ ಒಗ್ಗದ ಅಥವ ಸಂಪನ್ಮೂಲ ಸಾಲದಿದ್ದಾಗ ಆಯ್ಕೆ ಮಾಡದೆಯೂ ಇರಬಹುದು. ಇದು ಪುಸ್ತಕಗಳ ಮೌಲ್ಯೀಕರಣವಲ್ಲ, ಬದಲಾಗಿ ಉಪಯುಕ್ತತೆ, ಓದುಗರ ಅಭಿರುಚಿ ಮತ್ತು ಗ್ರಂಥಾಲಯಗಳ ಧ್ಯೇಯಗಳಿಗೆ ಸಂಬಂಧಿಸಿದ ವಿಷಯ. ಕೇಂದ್ರೀಕೃತ ಏಕಗವಾಕ್ಷಿ ಸಗಟು ಖರೀದಿಯಿಂದ ಅಷ್ಟೇನೂ ಜನಪ್ರಿಯವಲ್ಲದ ಪ್ರಕಾಶಕರ ಮತ್ತು ಸಾಹಿತಿಗಳ ಸಮಸ್ಯೆ ಬಗೆಹರಿಯಬಹುದಾದರೂ ಗ್ರಂಥಾಲಯಗಳಲ್ಲಿ ಮುಂದೆ ಪುಸ್ತಕಗಳ ಬಳಕೆಯ ದೃಷ್ಟಿಯಿಂದ ಇದು ಸರಿಯಲ್ಲ. ಗ್ರಂಥಾಲಯಗಳು ಪುಸ್ತಕೋದ್ಯಮಕ್ಕಾಗಿಯಲ್ಲ, ಓದುಗರಿಗಾಗಿ ಎಂಬುದು ಮುಖ್ಯ. ನಮ್ಮಲ್ಲಿ ಮಾರಾಟವಾಗುವ ಪುಸ್ತಕಗಳಲ್ಲಿ ಶೇ. ೨೫ ರಷ್ಟನ್ನು ಮಾತ್ರ ವ್ಯಕ್ತಿಗಳು ಖರೀದಿಸಿದರೆ ಮಿಕ್ಕ ಶೇ. ೭೫ ರಷ್ಟನ್ನು ಗ್ರಂಥಾಲಯಗಳು ಖರೀದಿಸುತ್ತವೆ. ಈ ೨೫ : ೭೫ ಅನುಪಾತ ಸಗಟು ಖರೀದಿಗಾಗಿಯೇ ಪುಸ್ತಕಗಳನ್ನು ಪ್ರಕಟಿಸುವ ಪದ್ದತಿಯಿಂದ ಬೆಳೆದಿದೆ. ಇದನ್ನು ಸರಿಪಡಿಸಲು ಪುಸ್ತಕೋದ್ಯಮ ಮಾರುಕಟ್ಟೆ ವಿಸ್ತರಿಸಬೇಕೆ ಹೊರತು ಗ್ರಂಥಾಲಯಗಳನ್ನೇ ಪೂರ್ಣ ಅವಲಂಬಿಸಬಾರದು. ಅಮೆರಿಕಾದಲ್ಲಿ ಇದೇ ಅನುಪಾತ ಕ್ರಮವಾಗಿ ೯೫ : ೫ ಇದ್ದು, ಗ್ರಂಥಾಲಯಗಳು ಖರೀದಿಸಿದ ಶೇ ೫ ರಷ್ಟು ಪುಸ್ತಕಗಳನ್ನು ಎರವಲು ಪಡೆದು ಬಳಸಿದ್ದು ನೇರವಾಗಿ ವ್ಯಕ್ತಿಗಳಿಗೆ ಮಾರಾಟವಾದ ಶೇ. ೯೫ ಕ್ಕೆ ಸಮನಾಗಿರುತ್ತದೆ. ವೈಯಕ್ತಿಕ ಪುಸ್ತಕ ಕೊಳ್ಳುವಿಕೆ ಕಡಿಮೆ ಇರುವುದರಿಂದ ಪುಸ್ತಗಳನ್ನು ಗ್ರಂಥಾಲಯಗಳಿಗೆ ಮಾರಾಟಮಾಡುವ ಪೈಪೋಟಿ ನಿರೀಕ್ಷಿತವಾದದ್ದೆ ಮತ್ತು ಒಂದೇ ಉನ್ನತ ಸಮಿತಿ ಆಯ್ಕೆ ಮಾಡುವುದರಿಂದ ಹಲವಾರು ಆಯ್ಕೆ ಸಮಿತಿ ಅಥವ ಗ್ರಂಥಾಲಯಗಳಿಗೆ ಅರ್ಜಿ ಸಲ್ಲಿಸುವುದು ತಪ್ಪುತ್ತದೆಯಾದರೂ ಸ್ಥಳೀಯ ಸಾಧಾರಣ ಮಾರಾಟಗಾರರಿಂದಲೂ ಪುಸ್ತಕ ಕೊಳ್ಳುವಂತಿರಬೇಕು. ಕನ್ನಡ ಪುಸ್ತಕಗಳ ವಿತರಣೆ ಮತ್ತು ಮಾರಾಟ ಜಾಲ ಶಿಥಿಲವಾಗಲು ಈ ಕೇಂದ್ರೀಕೃತ ಸಗಟು ಖರೀದಿಯೂ ಒಂದು ಕಾರಣ. ಪುಸ್ತಕೋದ್ಯಮದ ಸಮಸ್ಯೆಗಳನ್ನು ಪುಸ್ತಕೊದ್ಯಮವೇ ಗ್ರಂಥಾಲಯಗಳ ಹೊರಗೆ ಬಗೆಹರಿಸಿಕೊಳ್ಳುವುದು ಲೇಸು.

ಅವಶ್ಯವಿದ್ದರೆ ಗ್ರಂಥಾಲಯ ಕಾಯಿದೆಗೆ ತಿದ್ದುಪಡಿ ತಂದು, ಸಗಟು ಖರೀದಿಯನ್ನು ವಿಕೇಂದ್ರಿಕರಿಸಿ, ಕಾಯಿದೆಯನ್ವಯ ಈಗಾಗಲೇ ಇರುವ ನಿಬಂಧನೆಯಂತೆ ಸದಸ್ಯ ಓದುಗರು ಮತ್ತು ಉಪಾಧ್ಯಾಯರನ್ನೊಳಗೊಂಡ ಸ್ಥಳೀಯ ಗ್ರಂಥಾಲಯ ಸಲಹಾ ಸಮಿತಿಗಳೇ ಸ್ಥಳೀಯ ಅವಶ್ಯಕತೆಗನುಗುಣವಾಗಿ ಪುಸ್ತಕಗಳ ಆಯ್ಕೆಯನ್ನು ಮಾಡಲು ಅನುವು ಮಾಡಬೇಕು. ಸಾಧ್ಯವಾದಷ್ಟೂ ವಿವಿಧ ಕ್ಷೇತ್ರಗಳ ತಜ್ಞರಿಗೆ ಮತ್ತು ಓದುಗರಿಗೆ ಈ ಸಮಿತಿಯಲ್ಲಿ ಅವಕಾಶ ನೀಡಿದರೆ ಮಾತ್ರ ಆಯ್ಕೆ ವೈವಿಧ್ಯಮಯವಾಗಿ ಓದುಗರ ಅಭಿರುಚಿಯನ್ನು ಪ್ರತಿಬಿಂಬಿಸಲು ಸಾಧ್ಯ.

-----------------------------------------------------------------------------

* ಪುಸ್ತಕ ಆಯ್ಕೆಯಲ್ಲಿ ಓದುಗರ ಪ್ರಾತಿನಿಧ್ಯ, *ಕನ್ನಡ ಪ್ರಭ*, ಏಪ್ರಿಲ್ ೨೮, ೨೦೦೬, ಪು. ೬.

## ಲೇಕಖರ ವಿವರ



ಡಾ. ಎಂ ಎಸ್ ಶ್ರೀಧರ್‌ರವರು ಗಣಿತ ಹಾಗೂ ಬಿಸಿನೆಸ್ ಮ್ಯಾನೇಜ್‌ಮೆಂಟ್ ಎರಡೂ ವಿಷಯಗಳಲ್ಲಿ ಸ್ನಾತಕೋತ್ತರ ಪದವೀಧರರಾಗಿದ್ದು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ಅವರು ಕಳೆದ ೩೭ ವರ್ಷಗಳಿಂದ ಗ್ರಂಥಾಲಯ ಕ್ಷೇತ್ರದಲ್ಲಿದ್ದು, ೧೯೭೮ ರಿಂದ ಇಸ್ರೋ ಉಪಗ್ರಹ ಕೇಂದ್ರದ ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದಕ್ಕೂ ಮುನ್ನ ಎನ್ ಎ ಎಲ್, ಐ ಐ ಎಂ (ಬೆಂಗಳೂರು) ಹಾಗೂ ಮೈಸೂರು ವಿಶ್ವ ವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವವಿದೆ.

ಡಾ. ಶ್ರೀಧರ್ ಅವರು ೪ ಪುಸ್ತಕಗಳು ಮತ್ತು ೮೮ ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸಿದ್ದಾರೆ, ಹಾಗೂ ವಿವಿಧ ಪುಸ್ತಕಗಳಿಗಾಗಿ ೫ ಪಠ್ಯಗಳನ್ನೂ ಬರೆದಿದ್ದಾರೆ. ಇವರು ಮುಕ್ತ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ ೧೯ ಪಠ್ಯ ಸಾಮಾಗ್ರಿಯನ್ನು ರಚಿಸಿದ್ದಾರೆ. ಇದಲ್ಲದೆ ಸುಮಾರು ೪೫ ಲೇಖನ/ ಪ್ರವಚನಗಳನ್ನು ವಿವಿಧ ಸಮ್ಮೇಳನ / ವಿಚಾರ ಸಂಕಿರಣಗಳಲ್ಲಿ ಮಂಡಿಸಿದ್ದಾರೆ.

**E-mail:** mirlesridhar@gmail.com,